JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕೋವಿಡ್–19 ಸಂದರ್ಭದಲ್ಲಿ ಮತ್ತು ನಂತರದಲ್ಲಿ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಸವಾಲು ಮತ್ತು ಸಾಧ್ಯತೆಗಳು

**ಆಶಾ.ಜಿ.ಬಿ**
ಸಂಶೋಧನಾ ವಿದ್ಯಾರ್ಥಿನಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ,ವಿದ್ಯಾರಣ್ಯ.

## ಪ್ರಸ್ತಾವನೆ:

ಭಾರತದಲ್ಲಿ ಸುಮಾರು 400 ಮಿಲಿಯನ್ ಜನರು ದುಡಿಯುವವರಿದ್ದು, ಇವರಲ್ಲಿ ಶೇ.85 ರಷ್ಟು ಜನರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಸಂಘಟಿತ ವಲಯದಲ್ಲಿ 120 ಮಿಲಿಯನ್ ರಷ್ಟು ಮಹಿಳೆಯರು ತೊಡಗಿಕೊಂಡಿದ್ದಾರೆ. ಆದರೆ ಅನೌಪಚಾರಿಕ (ಅಸಂಘಟಿತ) ವಲಯದಲ್ಲಿ ಕೆಲಸಮಾಡುವವರನ್ನು ಅಂಕಿ–ಅಂಶಗಳಲ್ಲಿ ಸೇರಿಸಲಾಗಿಲ್ಲ. ಈ ಸೇರಿಸಲಾಗದವರ ವರ್ಗಗಳಿಗೆ ದಾಖಲೆಗಳಿಲ್ಲದೇ, ಈ ವಲಯಕ್ಕೆ ಸಂಬಂಧಿಸಿದ ಕೆಲಸವನ್ನು ಕೂಲಿ ಕೆಲಸವೆಂದು ಪರಿಗಣಿಸಲಾಗಿದೆ. ಇಂತಹ ವಲಯಗಳಲ್ಲಿ ಕೆಲಸ ಮಾಡುವವರೆಂದರೆ–ರೈತ ಮಿತ್ರರು, ಗುಮಾಸ್ತರು, ನೀರು ಘಂಟಿ, ಬೀಲ್ ಕಲೆಕ್ಟರ್, ಅರೆ ಕಾಲಿಕ ಶಿಕ್ಷಕರು, ಬಿಸಿಯೂಟ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಎ.ಎನ್.ಎಮ್, ಸಫಾಯಿ ಕರ್ಮಚಾರಿಗಳು, ಮನೆಗೆಲಸಗಾರರು ಇನ್ನೂ ಮುಂತಾದವರು. ಇವರು ಹೆಚ್ಚು ಸಮಯ ದುಡಿದು ಕಡಿಮೆ ವೇತನವನ್ನು ಪಡೆಯುತ್ತಾ ತಳಮಟ್ಟದ ಜೀವನವನ್ನು ಸಾಗಿಸುತ್ತಿದ್ದಾರೆ.

ನಮಗೆ ತಿಳಿದಿರುವಂತೆ ಕೋವಿಡ್ 19 ವೈರಸ್ ಸಾಂಕ್ರಾಮಿಕವು ಜಗತ್ತಿನ ಎಲ್ಲಾ ಕ್ಷೇತ್ರಗಳಲ್ಲಿ ಬಿರುಗಾಳಿಯಂತಹ ಸ್ಥಿತ್ಯಂತರಗಳನ್ನು ತಂದಿತು. ಈ ಸ್ಥಿತ್ಯಂತರಕ್ಕೆ ಯಾವುದೇ ಒಂದು ಕ್ಷೇತ್ರವು ಹೊರತಾಗಿಲ್ಲ. ನಿರ್ಧಿಷ್ಟವಾಗಿ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರಾದ ಅತಿಥಿ ಶಿಕ್ಷಕಿಯರು, ಬಿಸಿಯೂಟ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಎ.ಎನ್.ಎಮ್ ಗಳು ಕೋವಿಡ್ ಸಂದರ್ಭದಲ್ಲಿ ಫ್ರೆಂಟ್ ಲೈನ್ ವರ್ಕರ್ಸ್ (ಮುಂಚೂಣಿಯ ಕೆಲಸಗಾರರಾಗಿ) ಆಗಿ ದುಡಿದಿರುವುದು ಗೊತ್ತಿರುವ ವಿಷಯ. ಇವರೆಲ್ಲರು ಸರ್ಕಾರವು ಜಾರಿಗೆ ತರುವ ಅಭಿವೃದ್ಧಿ ಕಾರ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಸಮಾಜ ಸೇವಕರಂತೆ ಕಾರ್ಯನಿರ್ವಯಿಸುವವರಾಗಿದ್ದಾರೆ.

ಇವರುಗಳು ಈ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಕಡಿಮೆ ಶಿಕ್ಷಣವನ್ನು ಹೊಂದಿದವರಾಗಿದ್ದು, ಉದ್ಯೋಗ ಮಾಡಲೇಬೇಕಾದ ಅನಿವಾರ್ಯತೆ ಇರುವುದರಿಂದ, ಆರ್ಥಿಕ ಅಭದ್ರತೆ ಮತ್ತು ಬಡತನದಿಂದಾಗಿ ಈ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರು ಕೋವಿಡ್ 19 ಸಂದರ್ಭದಲ್ಲಿ ಮತ್ತು ನಂತರದಲ್ಲಿ ಎದುರಿಸಿದ ಸವಾಲು ಮತ್ತು ಸಾಧ್ಯತೆಗಳ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

## ಅಧ್ಯಯನದ ಉದ್ದೇಶಗಳು

- ಕೋವಿಡ್ 19 ಸಂದರ್ಭದಲ್ಲಿ ಮತ್ತು ನಂತರದಲ್ಲಿ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಸವಾಲು ಮತ್ತು ಸಾಧ್ಯತೆಗಳನ್ನು ಗುರುತಿಸುವುದು.
- ಕೋವಿಡ್ 19 ಸಂದರ್ಭದಲ್ಲಿ ಮತ್ತು ನಂತರದಲ್ಲಿ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಉದ್ಯೋಗ ಭದ್ರತೆಯನ್ನು ತಿಳಿಯುವುದು.

### ಪ್ರಕಲ್ಪನೆಗಳು

- ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳಲ್ಲಿ ಸರ್ಕಾರವು ಯಾವುದೇ ರೀತಿಯ ಬದಲಾವಣೆಗಳನ್ನು ತಂದಿಲ್ಲ.
- ಕೋವಿಡ್ 19 ಸಂದರ್ಭ ಹಾಗೂ ನಂತರದಲ್ಲಿ ಕಾರ್ಯಕರ್ತೆಯರ ಕಾರ್ಯಕ್ಷಮತೆಯಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬಂದಿವೆ.

## ಅಧ್ಯಯನದ ಮಹತ್ವ

ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇವರ ಶೈಕ್ಷಣಿಕ ವಿದ್ಯಾರ್ಹತೆಯು ಕಡಿಮೆ ಇರುವ ಕಾರಣದಿಂದಾಗಿಯೇ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆಂದು ಕ್ಷೇತ್ರಕಾರ್ಯದ ಮೂಲಕ ಸ್ಪಷ್ಟವಾಗುತ್ತದೆ. ಇವರುಗಳಿಗೆ ಸರ್ಕಾರದಿಂದ ಸಮರ್ಪಕವಾದ ಸವಲತ್ತುಗಳು, ದುಡಿಮೆಯ ಭದ್ರತೆ ಹಾಗೂ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯಲು ವಿಫಲರಾಗಿದ್ದಾರೆ. ಕಾರ್ಯಕರ್ತೆಯರು ವೃತ್ತಿಯಲ್ಲಿ ಉನ್ನತ ಮಟ್ಟದ ತೃಪ್ತಿಯನ್ನು ಹೊಂದಿಲ್ಲ. ಸಾಮಾನ್ಯ ದಿನಗಳಲ್ಲಿ ಇವರಿಗೆ ವೃತ್ತಿ ಒತ್ತಡಗಳು ಕಂಡುಬರುವುದು ಸಹಜವಾದ ವಿಷಯವಾಗಿದೆ. ಕೋವಿಡ್ 19ರ ಸಂದರ್ಭದಲ್ಲಿ ಇವರುಗಳ ಮಹತ್ವದ ಬಗ್ಗೆ ಹಾಗೂ ವೃತ್ತಿ ಶ್ರದ್ಧೆಯ ಬಗ್ಗೆ ದೇಶದ ಪ್ರತಿ ನಾಗರಿಕನು ಮೆಚ್ಚಬೇಕಾದ ಕಾರ್ಯವನ್ನು ಸಮಾಜಕ್ಕೆ ಒದಗಿಸುವಲ್ಲಿ ಸಫಲರಾಗಿದ್ದಾರೆ. ದೇಶವು ಕಂಡ ಹಲವಾರು ಭಯಾನಕ ರೋಗಗಳಲ್ಲಿ ಕೋವಿಡ್ 19 ಸಹ ಒಂದಾಗಿದೆ. ವಿಶೇಷವಾಗಿ ಕೋವಿಡ್ 19ರ ಸೋಂಕಿನಿಂದ ಮೃತಪಟ್ಟವರು ಸಂಖ್ಯೆಯನ್ನು ನೋಡಿದಾಗ ಈ ರೋಗದ ಅಪಾಯವನ್ನು ಅಳೆಯ ಬಹುದಾಗಿದೆ. ಯಾವುದೇ ರೀತಿಯ ಅನಾರೋಗ್ಯ ಬಂದಾಗ ಸಾರ್ವಜನಿಕರು ನೆನಪಿಸಿಕೊಳ್ಳುವುದು ಸರ್ಕಾರಿ ಆಸ್ಪತ್ರೆಗಳೆಂಬುದು ಈ ರೋಗದ ಮೂಲಕ ಮತ್ತೊಮ್ಮೆ ಸಾಬೀತಾಗಿದೆ. ಸಾಂಕ್ರಮಿಕ

ರೋಗವಾಗಿರುವ ಕಾರಣದಿಂದ ರೋಗಿಗೂ ಹಾಗೂ ವೈದ್ಯರಿಗೂ ಒಂದೇ ಪ್ರಮಾಣದ ಜೀವ ಅಪಾಯವಿರುತ್ತದೆ. ಆದರೆ ವೈದ್ಯರು ಹಾಗೂ ವೈಧ್ಯ ಸಿಬ್ಬಂದಿಗಳಾದ ಆಶಾ ಕಾರ್ಯಕರ್ತೆಯರು ತಮ್ಮ ಪ್ರಾಣವನ್ನು ಲೆಕ್ಕಿಸದೇ ತಮ್ಮ ಕಾರ್ಯವನ್ನು ನಿರ್ವಹಿಸಿ ಹಲವಾರು ಆಶಾ ಕಾರ್ಯಕರ್ತೆಯರು ಜೀವವನ್ನು ಕಳೆದುಕೊಂಡು ನಿಜವಾದ ಕರ್ತವ್ಯ ಪಾಲನೆಯನ್ನು ಮಾಡಿದ್ದಾರೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಇವರುಗಳಿಗೆ ಪರಿಹಾರವನ್ನು ಒದಗಿಸಿದ್ದರು ನೊಂದ ಕುಟುಂಬಗಳಿಗೆ ಪರಿಣಾಮಕಾರಿಯಾಗಿಲ್ಲವೆಂಬುದು ತಿಳಿದು ಬರುತ್ತದೆ. ವೃತ್ತಿಯಲ್ಲಿ ತೊಡಗಿಸಿಕೊಂಡಾಗ ಮೂಲಭೂತ ಸೌಲತ್ತುಗಳು, ವೃತ್ತಿಯನ್ನು ನಿಷ್ಠೆಯಿಂದ ಸ್ವಿಕರಿಸಿ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಕ್ಷೇತ್ರಕಾರ್ಯದ ಮೂಲಕ ಕಾರ್ಯಕರ್ತೆಯರ ಬಿಕ್ಕಟ್ಟುಗಳನ್ನು ಹಾಗೂ ಕೋವಿಡ್ 19ರ ಸಂದರ್ಭದಲ್ಲಿ ಮರಣಿಸಿದ ಕಾರ್ಯಕರ್ತೆಯರ ಕುಟುಂಬಗಳಿಗೆ ಪರಿಹಾರವು ಸರಿಯಾಗಿ ಸಿಗದಿರುವುದು ಸ್ಪಷ್ಟವಾಗಿ ತಿಳಿದುಬಂದಿದೆ. ಈ ಅಧ್ಯಯನದಿಂದ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಸವಾಲುಗಳನ್ನು ಮತ್ತು ಕೋವಿಡ್–19 ಸಂದರ್ಭದಲ್ಲಿ ಎದುರಿಸಿದ ತೊಂದರೆಯಗಳ ಬಗ್ಗೆ ತಿಳಿಯುವುದರಿಂದ ಈ ಅಧ್ಯಯನವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

## ಅಧ್ಯಯನದ ಮಾದರಿಯ ವಿಧಾನ ಮತ್ತು ಗಾತ್ರ :

ಪ್ರಸ್ತುತ ಕ್ಷೇತ್ರಾಧ್ಯಯನಕ್ಕೆ ಚಿತ್ರದುರ್ಗ ತಾಲ್ಲೂಕಿನ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರನ್ನು ಸರಳ ಯಾದೃಚ್ಚಿಕ ಮಾದರಿಯ ಮೂಲಕ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರು ಕೋವಿಡ್ 19 ಸಂದರ್ಭದಲ್ಲಿ ಮತ್ತು ನಂತರದಲ್ಲಿ ಎದುರಿಸಿದ ಸವಾಲು ಮತ್ತು ಸಾಧ್ಯತೆಗಳನ್ನು ಈ ವಿಧಾನದಿಂದ 50 ಕಾರ್ಯಕರ್ತೆಯರನ್ನು ಆಯ್ಕೆ ಮಾಡಿಕೊಂಡು ಸಂದರ್ಶನದ ಮೂಲಕ ಮಾಹಿತಿಯನ್ನು ಕಲೆಹಾಕಲಾಗಿದೆ. ನಂತರದಲ್ಲಿ ವಿಶ್ಲೇಷಣೆಯಿಂದ ಫಲಿತಗಳನ್ನು ಕಂಡುಕೊಳ್ಳಲಾಗಿದೆ, ಇವುಗಳಿಗೆ ತಕ್ಕಂತೆ ಸಲಹೆಗಳನ್ನು ಈ ಲೇಖನದಲ್ಲಿ ಸೂಚಿಸಲಾಗಿದೆ.

ಕೋಷ್ಟಕ ಸಂಖ್ಯೆ:1

ಕಾರ್ಯಕರ್ತೆಯರ ಸಂಖ್ಯೆ. ವಿವರ

| ಕ್ರ.ಸಂ | ತಾಲ್ಲೂಕು | ಕಾರ್ಯಕರ್ತೆಯರು | ಕಾರ್ಯಕರ್ತೆಯರ ಸಂಖ್ಯೆ |
|---|---|---|---|
| 1 | ಚಿತ್ರದುರ್ಗ | ಆಶಾ ಕಾರ್ಯಕರ್ತೆಯರು | 10 |
| 2 | | ಅಂಗನವಾಡಿ ಕಾರ್ಯಕರ್ತೆಯರು | 10 |
| 3 | | ಬಿಸಿಯೂಟ ಕಾರ್ಯಕರ್ತೆಯರು | 10 |
| 4 | | ಎ.ಎನ್.ಎಂ | 10 |
| 5 | | ಅತಿಥಿ ಶಿಕ್ಷಕಿಯರು | 10 |
| | | | ಒಟ್ಟು=50 |

ಕೋಷ್ಟಕ ಸಂಖ್ಯೆ–1 ರಲ್ಲಿ ತಿಳಿಸಿರುವಂತೆ ಆಯ್ಕೆಮಾಡಿಕೊಂಡು ತಳಮಟ್ಟದ ಅಭಿವೃದ್ಧಿ ಕಾರ್ಯಕರ್ತೆಯರನ್ನು ತಲಾ 10 ಕಾರ್ಯಕರ್ತೆಯರಂತೆ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಸೇರಿದವರನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಕೋಷ್ಟಕ ಸಂಖ್ಯೆ–2

ಕಾರ್ಯಕರ್ತೆಯರ ವಿದ್ಯಾರ್ಹತೆಯ ವಿವರ

| ಕ್ರ.ಸಂ | ವಿದ್ಯಾರ್ಹತೆಯ ವಿವರ | ಆಶಾ ಕಾರ್ಯಕರ್ತೆ | ಅಂಗನವಾಡಿ ಕಾರ್ಯಕರ್ತೆ | ಬಿಸಿಯೂಟ ಕಾರ್ಯಕರ್ತೆ | ಎ.ಎನ್.ಎಂ | ಅತಿಥಿ ಶಿಕ್ಷಕಿ |
|---|---|---|---|---|---|---|
| 1 | 7ನೇ ತರಗತಿ | 3 (30) | 3 (30) | 4 (40) | 0 (0) | 0 (0) |
| 2 | ಎಸ್.ಎಸ.ಎಲ್.ಸಿ | 3 (30) | 4 (40) | 3 (30) | 0 (0) | 0 (0) |
| 3 | ಪಿ.ಯು.ಸಿ | 3 (10) | 2 (20) | 3 (30) | 10 (100) | 0 (0) |
| 4 | ಬಿ.ಎ | 1 (10) | 1 (10) | 0 (0) | 0 (0) | 10 (100) |
| | ಒಟ್ಟು | 10 | 10 | 10 | 10 | 10 |

ಕೋಷ್ಟಕ ಸಂಖ್ಯೆ 6ರಲ್ಲಿ ಕಂಡುಬರುವಂತೆ, ಆಶಾ ಕಾರ್ಯಕರ್ತೆಯರು 7ನೇ ತರಗತಿ, ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ವಿದ್ಯಾರ್ಹತೆ ಹೊಂದಿದವರು ಶೇ.30 ರಷ್ಟು ಇದ್ದು, ಕೇವಲ ಶೇ.10 ರಷ್ಟು ಕಾರ್ಯಕರ್ತೆಯರು ಮಾತ್ರ ಪದವಿದರರಾಗಿದ್ದರೆ. ಅಂಗನವಾಡಿ ಕಾರ್ಯಕರ್ತೆಯರು ಶೇ.40 ರಷ್ಟು ಎಸ್.ಎಸ್.ಎಲ್.ಸಿ ಯನ್ನು ಪೂರ್ಣಗೊಳಿಸಿದವರಿದ್ದಾರೆ. ಬಿಸಿಯೂಟ ಕಾರ್ಯಕರ್ತೆಯರು ಅಧಿಕವಾಗಿ ಶೇ.40 ರಷ್ಟು 7ನೇ ತರಗತಿಯವರಾಗಿದ್ದು, ಪದವಿದರರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿಲ್ಲ. ಎ.ಎನ್.ಎಮ್ ರನ್ನು ಗಮನಿಸಿದಾಗ ಎಲ್ಲರೂ ವಿದ್ಯಾರ್ಹತೆ ಹೊಂದಿದವರಾಗಿದ್ದು, ಇದಕ್ಕೆ ಕಾರಣ ಈ ಉದ್ಯೋಗದ ಕನಿಷ್ಟ ವಿದ್ಯಾರ್ಹತೆ ಇದಾಗಿದೆ. ಅತಿಥಿ ಶಿಕ್ಷಕಿಯರು ಪಿ.ಯು.ಸಿ, ಡಿ.ಎಡ್ ಹಾಗೂ ಬಿ.ಎ, ಬಿ.ಇಡಿ ವಿದ್ಯಾರ್ಹತೆಯನ್ನು ಹೊಂದಿದ್ದು ನಿರುದ್ಯೋಗದಿಂದಾಗಿ ಈ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ.

ಕೋಷ್ಟಕ ಸಂಖ್ಯೆ–3

ಕಾರ್ಯಕರ್ತೆಯರ ಕುಟುಂಬದ ವಿಧದ ವಿವರ

| ಕ್ರಮ ಸಂಖ್ಯೆ | ಕುಟುಂಬದ ವಿಧ | ಆಶಾ ಕಾರ್ಯಕರ್ತೆ | ಅಂಗನವಾಡಿ ಕಾರ್ಯಕರ್ತೆ | ಬಿಸಿಯೂಟ ಕಾರ್ಯಕರ್ತೆ | ಎ.ಎನ್.ಎಂ | ಅತಿಥಿ ಶಿಕ್ಷಕಿ |
|---|---|---|---|---|---|---|
| 1 | ವಿಭಕ್ತ | 8 (80) | 7 (80) | 6 (60) | 7 (70) | 6 (60) |
| 2 | ಅವಿಭಕ್ತ | 2 (20) | 3 (30) | 4 (40) | 3 (30) | 4 (40) |
| | ಒಟ್ಟು | 10 | 10 | 10 | 10 | 10 |

ಕೋಷ್ಟಕ ಸಂಖ್ಯೆ 7 ಅನ್ನು ಗಮನಿಸಿದಾಗ ಎಲ್ಲಾ ರೀತಿಯ ಕಾರ್ಯಕರ್ತೆಯರು ಹೆಚ್ಚಾಗಿ ವಿಭಕ್ತ ಕುಟುಂಬವರಾಗಿದ್ದಾರೆ. ಈ ಮೇಲಿನ ಅಂಕಿ–ಸಂಕ್ಯೆಗಳ ಮೂಲಕ ತಿಳಿದುಬರುವುದೇನೆಂದರೆ ಗ್ರಾಮಗಳಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆ ಇದೆ ಎಂದು ಕಾಣಬಹುದಾಗಿದೆ.

ಕೋಷ್ಟಕ ಸಂಖ್ಯೆ–4

ಕಾರ್ಯಕರ್ತೆಯರ ಉಳಿತಾಯದ ವಿವರ

| ಕ್ರ.ಸಂ | ಉಳಿತಾಯದ ವಿವರ | ಆಶಾ ಕಾರ್ಯಕರ್ತೆ | ಅಂಗನವಾಡಿ ಕಾರ್ಯಕರ್ತೆ | ಬಿಸಿಯೂಟ ಕಾರ್ಯಕರ್ತೆ | ಎ.ಎನ್.ಎಂ | ಅತಿಥಿ ಶಿಕ್ಷಕಿ |
|---|---|---|---|---|---|---|
| *1* | ಹೌದು | *5 (50)* | *4 (40)* | *6 (60)* | *6 (60)* | *7 (70)* |
| *2* | ಇಲ್ಲ | *5 (50)* | *6 (60)* | *4 (40)* | *4 (40)* | *3 (30)* |
| | ಒಟ್ಟು | *10* | *10* | *10* | *10* | *10* |

ಕೋಷ್ಟಕ ಸಂಖ್ಯೆ 10ರಲ್ಲಿ ಸ್ಪಷ್ಟಪಡಿಸಿದಂತೆ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾಯಕರ್ತೆಯರು ತಮ್ಮ ಗೌರವಧನದಿಂದ ಉಳಿದ ಹಣವನ್ನು ಉಳಿತಾಯ ಮಾಡುವ ಪ್ರಮಾಣ ಕಡಿಮೆ ಕಂಡುಬರುತ್ತದೆ. ಆದರೂ ಸಹಾ ಇವರು ಸ್ವಯಂ–ಸೇವಾ ಸಂಘಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ಹಣವನ್ನು ಉಳಿತಾಯ ಮಾಡಿದರೆ ಮಾತ್ರ ಆಪತ್ತು ಕಾಲದಲ್ಲಿ ಸಹಾಯಕ್ಕೆ ಬರುವುದರಿಂದ ಉಳಿತಾಯವನ್ನು ತಕ್ಕಮಟ್ಟಿಗೆ ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಗೌರವಧನವು ಇನ್ನೂಳಿದ ಕಾರ್ಯಕರ್ತೆಯರಿಗೆ ಹೋಲಿಸಿದರೆ ಉತ್ತಮ ಮಟ್ಟದಲ್ಲಿರುವುದರಿಂದ ಉಳಿತಾಯಕ್ಕೆ ಒತ್ತು ನೀಡುತ್ತಿರುವುದಾಗಿ ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ ಸಂಖ್ಯೆ–5

ಕಾರ್ಯಕರ್ತೆಯರ ಆರ್ಥಿಕ ಸುಧಾರಣೆಗೆ ಸ್ಥಳೀಯ ಸೌಲಭ್ಯಗಳ ಬಳಸಿಕೊಂಡ ವಿವರ

| ಕ್ರ.ಸಂ | ಸ್ಥಳೀಯ ಸೌಲಭ್ಯಗಳ ಬಳಸಿಕೊಂಡ ವಿವರ | ಆಶಾ ಕಾರ್ಯಕರ್ತೆ | ಅಂಗನವಾಡಿ ಕಾರ್ಯಕರ್ತೆ | ಬಿಸಿಯೂಟ ಕಾರ್ಯಕರ್ತೆ | ಎ.ಎನ್.ಎಂ | ಅತಿಥಿ ಶಿಕ್ಷಕಿ |
|---|---|---|---|---|---|---|
| 1 | ಹೌದು | 4 (40) | 5 (50) | 6 (60) | 5 (50) | 6 (60) |
| 2 | ಇಲ್ಲ | 6 | 5 | 4 | 5 | 4 |

| | | | | | | |
|---|---|---|---|---|---|---|
| | | (60) | (50) | (40) | (50) | (40) |
| | ಒಟ್ಟು | 10 | 10 | 10 | 10 | 10 |

ಮೇಲಿನ ಕೋಷ್ಟಕ 11ನ್ನು ಗಮನಿಸಿದಾಗ, ಸರಿ ಸುಮಾರು ಶೇಕಡಾ 50ರಷ್ಟು ಕಾರ್ಯಕರ್ತೆಯರಿಗೆ ಗ್ರಾಮಪಂಚಾಯಿತಿಯಿಂದ ಮನೆಗಳು ದೊರೆತಿವೆ. ಅದೇ ರೀತಿ ಕೆಲವರಿಗೆ ಗೌರವಧನ ಇದ್ದರೂ ಸಹಾ ಸಂಬಳವು ಬರುತ್ತದೆ. ಅಷ್ಟೆ ಪ್ರಮಾಣದಲ್ಲಿ ಇನ್ನೂ ಕೆಲವರಿಗೆ ಗ್ರಾಮಪಂಚಾಯಿತಿ ಕಡೆಯಿಂದ ಯಾವುದೇ ರೀತಿಯ ಮನೆಯ ಸೌಲಭ್ಯವು ದೊರೆತಿಲ್ಲವೆಂಬುದು ಕ್ಷೇತ್ರಕಾರ್ಯದ ಮೂಲಕ ಸ್ಪಷ್ಟವಾಗಿದೆ. ಹಿರಿಯರಿಗೆ ವೃದ್ದಾಪ್ಯವೇತನವನ್ನು ಮಂಜೂರು ಮಾಡಿಲ್ಲದಿರುವುದಾಗಿ ಸ್ಥಳೀಯ ಸೌಲಭ್ಯಗಳು ದೊರೆತಿಲ್ಲವೆಂಬುವವರು ತಿಳಿಸಿದ್ದಾರೆ. ಅದೇ ಅಲ್ಲದೇ ಇನ್ನಿತರ ಸರ್ಕಾರಿ ಸೌಲಭ್ಯಗಳಾದ ವಿಧವಾ ವೇತನ, ಭಾಗ್ಯಜ್ಯೋತಿ ಯೋಜನೆ, ಅನಿಲ ಭಾಗ್ಯ ಯೋಜನೆ, ಯಶಸ್ವಿನಿ ಯೋಜನೆಗಳಂತಹಾ ಸವಲತ್ತುಗಳು ಕಾರ್ಯಕರ್ತೆಯರಿಗೆ ಸಮರ್ಪಕವಾಗಿ ದೊರೆತಿಲ್ಲವೆಂಬುದು ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿದೆ.

## ಸಾಧ್ಯತೆಗಳು

- ಕೋವಿಡ್ 19ರ ಸಂದರ್ಭ ಹಾಗೂ ನಂತರದಲ್ಲಿ ಕಾರ್ಯ ನಿರ್ವಹಿಸಿದ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರ ಕಾರ್ಯಕ್ಷಮತೆಯನ್ನು ಅಭಿವೃದ್ಧಿಗೊಳಿಸುವುದು.
- ಮುಂದಿನ ದಿನಗಳಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನರ ಆರೋಗ್ಯ ಸುಧಾರಣೆಯಲ್ಲಿ ಕಾರ್ಯಕರ್ತೆಯರ ಜವಾಬ್ದಾರಿಯನ್ನು ಹೆಚ್ಚಿಸುವುದು.
- ಕೋವಿಡ್ 19 ಸಂದರ್ಭದಲ್ಲಿ ಎ.ಎನ್.ಎಂ, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಎದುರಿಸಿದ ಸಮಸ್ಯೆಗಳಿಗೆ ತಕ್ಕ ಪರಿಹಾರಗಳನ್ನು ನೀಡುವುದು.
- ಶಾಲಾ ಮಕ್ಕಳ ಶಿಕ್ಷಣ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಶಿಕ್ಷಕರು ಹಾಗೂ ಬಿಸಿಯೂಟ ಕಾರ್ಯಕರ್ತೆಯರ ನಿರ್ವಹಣಾ ಸಮಾರ್ಥ್ಯವನ್ನು ಹೆಚ್ಚಿಸುವುದು.
- ಕೋವಿಡ್ 19 ಸಾಂಕ್ರಮಿಕ ವೈರಸ್ ಜನ ಸಾಮಾನ್ಯರ ಜೀವದ ಮೇಲೆ ಬೀರಿದ ಪರಿಣಾಮವನ್ನು ಹಾಗೂ ಫ್ರಂಟ್ ಲೈನ್ ವರ್ಕರ್ಸ ಮೇಲೆ ಬೀರಿದ ಪರಿಣಾಮಗಳಿಗೆ ತಕ್ಕ ಯೋಜನೆಗಳೊಂದಿಗೆ ಪರಿಹಾರಗಳನ್ನು ಒದಗಿಸುವುದು.
- ಕಾರ್ಯಕರ್ತೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವುದ.
- ಕೋವಿಡ್ 19 ಸಂದರ್ಭ ಹಾಗೂ ನಂತರದಲ್ಲಿ ಕಾರ್ಯಕರ್ತೆಯರ ಸೇವೆಗಳ ನಿರ್ವಹಣೆಯ ಬಗ್ಗೆ ಗ್ರಾಮೀಣ ಜನತೆಯ ನಿಲುವು ಮತ್ತು ದೋರಣೆಗಳ ಬಗೆಗೆ ಅರಿವು ಮೂಡಿಸುವುದ.

ಸರ್ಕಾರವು ಒದಗಿಸುವ ಯಾವುದೇ ಯೋಜನೆಯು ಅಥವಾ ಕಾರ್ಯಕ್ರಮವು ಕೇವಲ ಏಕಮುಖವಾಗಿರಬಾರದ. ಸರ್ಕಾರದ ಒಂದು ಯೋಜನೆಯು ಫಲಕಾರಿಯಾಗಬೇಕಾದರೆ ಜನ ಸಮುದಾಯದ ಅಭಿಪ್ರಾಯ ಹಾಗೂ ಸಲಹೆಗಳು ಸಹಾ ಪ್ರಮುಖವಾಗಿರುತ್ತವೆ. ಅದೇ ರೀತಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಹಾಗೂ ಶಿಕ್ಷಣ ನೀತಿಗಳು ಸಫಲವಾಗಲು ಜನಸಮುದಾಯದ ಪಾತ್ರವು ಪ್ರಮುಖವಾಗಿದೆ. ಕೋವಿಡ್ 19 ಸಾಂಕ್ರಮಿಕ ರೋಗವು ಮರುಕಳಿಸುವ ಸಾದ್ಯತೆಯು ಇರುವುದರಿಂದ ಆರೋಗ್ಯ, ಶಿಕ್ಷಣ ಮುಂತಾದ ಪ್ರಾಥಮಿಕ ಅಂಶಗಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಸರ್ಕಾರವು ಜನ ಸಾಮಾನ್ಯರಿಗೆ ಹಾಗೂ ಕಾರ್ಯಕರ್ತೆಯರಿಗೆ ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ತೊಂದರೆಯಾಗದಿರುವ ರೀತಿಯಲ್ಲಿ ಕ್ರಮವನ್ನು ವಹಿಸಬೇಕಾದ ಅವಶ್ಯಕತೆ ಇದೆ.

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ತಾಲ್ಲೂಕನ್ನು ಕೇಂದ್ರೀಕರಿಸಿದೆ. ಈ ಅಧ್ಯಯನದಲ್ಲಿ ಐದು ವರ್ಗದ ಮಹಿಳಾ ಕಾರ್ಯಕರ್ತೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರುಗಳೆಂದರೆ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಬಿಸಿಯೂಟ ಕಾರ್ಯಕರ್ತೆಯರು, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರುಗಳ ಸಾಮಾಜಿಕ, ಆರ್ಥಿಕ ಸವಾಲುಗಳನ್ನು ಮತ್ತು ಸಾಧ್ಯಾತೆಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಪಡೆದು, ಈ ಕೆಳಗಿನಂತೆ ಫಲಿತಗಳನ್ನು ನೀಡಲಾಗಿದೆ.

1. ಚಿತ್ರದುರ್ಗ ತಾಲ್ಲೂಕಿಗೆ ಸಂಬಂಧಿಸಿದಂತೆ, ಆಯ್ಕೆ ಮಾಡಿಕೊಂಡ ಕಾರ್ಯಕರ್ತೆಯರಲ್ಲಿ 46ಕ್ಕಿಂತ ಅಧಿಕ ವಯಸ್ಸಿನವರು ಕಡಿಮೆ ಪ್ರಮಾಣದಲ್ಲಿದ್ದಾರೆ. ಮದ್ಯವಯಸ್ಸಿನವರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದಾರೆ. ಮುಖ್ಯವಾಗಿ ಅಂಗನವಾಡಿ ಕಾರ್ಯಕರ್ತೆಯರು ಶೇಕಡಾ 50 ರಷ್ಟು 46 ಮೇಲ್ಪಟ್ಟ ವಯಸ್ಸಿನವರಿದ್ದು, 18 ರಿಂದ 25 ನೇ ವಯಸ್ಸಿನ ಅಂಗನವಾಡಿ ಕಾರ್ಯಕರ್ತೆಯರು ಕೇವಲ ಶೇಕಡಾ 10 ರಷ್ಟು ಕಂಡುಬಂದಿದೆ.

ಒಟ್ಟಾರೆ ಗಮನಿಸಿದರೆ 18 ರಿಂದ 25ನೇ ವಯಸ್ಸಿನವರು ಈ ಕೆಲಸವನ್ನು ಆಯ್ಕೆ ಮಾಡಿಕೊಂಡಿರುವುದು ಕಡಿಮೆ ಪ್ರಮಾಣದಲ್ಲಿ ಕಂಡುಬಂದಿದ್ದು, ಈ ಅಧ್ಯಯನದ ಪ್ರಮುಖ ಫಲಿತವಾಗಿದೆ.

2. ಕಾರ್ಯಕರ್ತೆಯರ ವೈವಾಹಿಕ ಸ್ಥಿತಿಯನ್ನು ಗಮನಿಸಿದಾಗ, ವಿವಾಹಿತೆಯರು ಆಯ್ದುಕೊಂಡ ಕಾರ್ಯಕರ್ತೆಯರಲ್ಲಿ ಕ್ರಮವಾಗಿ ಶೇಕಡಾ 40, 50, 40, 50 ಹಾಗೂ 30 ರಷ್ಟು ಇದ್ದಾರೆ. ಪರಿತ್ಯಕ್ತೆಯರು ಈ ಕೆಲಸದಲ್ಲಿ ವಿರಳವೆಂಬುದು ಈ ಅಧ್ಯಾಯನದಲ್ಲಿ ಕಂಡುಬಂದಿದೆ.

ಒಟ್ಟಾರೆ ಗಮನಿಸಿದಾಗ, ಆರ್ಥಿಕವಾಗಿ ಹಿಂದುಳಿದವರು, ವಿಧವೆಯರು, ವಿಚ್ಛೇಧಿತರು ಈ ಕೆಲಸಕ್ಕೆ ಆಸಕ್ತಿ ತೋರಿಸುತ್ತಿರುವುದಾಗಿ ಹಾಗೂ ಇವರಿಗೆ ಪ್ರಮುಖ್ಯತೆಯನ್ನು ನೀಡಿರುವುದಾಗಿ ಕಂಡುಬಂದಿದೆ.

3. ಆಯ್ದುಕೊಂಡ ಕಾರ್ಯಕರ್ತೆಯರ ಧರ್ಮದ ಕುರಿತು ಅವಲೋಕಿಸಿದಾಗ, ಹಿಂದೂ ಧರ್ಮದವರು ಕ್ರಮವಾಗಿ ಶೇಕಡಾ 80, 80, 90, 80 ಹಾಗೂ 70 ರಷ್ಟು ಕಂಡುಬಂದಿದ್ದಾರೆ. ಅದೇ ರೀತಿ ಮುಸ್ಲಿಂ ಧರ್ಮದವರು ಇನ್ನೂಳಿದ ಶೇಕಡಾ

ಪ್ರಮಾಣದಲ್ಲಿ ಮಾತ್ರ ಅಧ್ಯಯನದಲ್ಲಿ ಕಂಡುಬಂದಿದ್ದಾರೆ. ಕ್ರಿಶ್ಚಿಯನ್ ಧರ್ಮದವರು ನನ್ನ ಅಧ್ಯಯನದಲ್ಲಿ ಕಂಡುಬಂದಿರುವುದಿಲ್ಲ.

ಒಟ್ಟಾರೆ ಗಮನಿಸಿದರೆ, ಹಿಂದೂ ಧರ್ಮದವರು ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುತ್ತಿರುವುದು ಚಿತ್ರದುರ್ಗ ತಾಲ್ಲೂಕಿನಲ್ಲಿ ಪ್ರಮುಖವಾಗಿ ಕಂಡುಬಂದಿರುವ ಫಲಿತವಾಗಿದೆ.

4. ಕಾರ್ಯಕರ್ತೆಯರ ಜಾತಿಯನ್ನು ಅವಲೋಕಿಸಿದಾಗ, ಆಶಾ ಕಾರ್ಯಕರ್ತೆಯರು, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ 40, 40 ಹಾಗೂ 40 ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಪರಿಶಿಷ್ಟ ಪಂಗಡದವರ ಪೈಕಿ ಅಂಗನವಾಡಿ, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಶೇಕಡಾ 30 ರಷ್ಟು ಇದ್ದು, ಇತರೆ ವರ್ಗದವರಲ್ಲಿ ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರು ಶೇಕಡಾ 50 ರಷ್ಟು ಇದ್ದಾರೆ. ಪರಿಶಿಷ್ಟ ಪಂಗಡದವರು ಶೇಕಡಾ 30ರಷ್ಟು ಅಂಗನವಾಡಿ, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರಾಗಿದ್ದಾರೆ.

ಒಟ್ಟಾರೆ ಗಮನಿಸಿದರೆ ಎಲ್ಲಾ ಜಾತಿಯವರು ಕಾರ್ಯಕರ್ತೆಯರಾಗಿರುವುದು ಚಿತ್ರದುರ್ಗ ತಾಲ್ಲೂಕಿನಲ್ಲಿರುವುದು ಅಧ್ಯಯನದ ಫಲಿತವಾಗಿದೆ.

5. ಕಾರ್ಯಕರ್ತೆಯರ ವಿದ್ಯಾರ್ಹತೆಯನ್ನು ನೋಡಿದಾಗ, 7ನೇ ತರಗತಿಯನ್ನು ಹೊಂದಿದವರು ಆಶಾ ಕಾರ್ಯಕರ್ತೆಯರಾಗಿ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿದೆ. ಬಿ.ಎ ಪದವಿಯನ್ನು ಪಡೆದವರು ಶೇಕಡಾ 10 ರಷ್ಟು ಮಾತ್ರ ಆಶಾ ಹಾಗೂ ಅಂಗನವಾಡಿ ಕರ್ಯಕರ್ತೆಯರಿದ್ದಾರೆ. ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರಾಗಿ ಸೇವೆ ಸಲ್ಲಿಸಲು ಕನಿಷ್ಟ ವಿದ್ಯಾರ್ಹತೆಯು ಪಿ.ಯು.ಸಿ ಹಾಗೂ ಬಿ.ಎ ಆಗಿರುವುದರಿಂದ ಅವರ ಶೇಕಡಾ ಪ್ರಮಾಣ 100 ರಷ್ಟಿದೆ. ಒಟ್ಟಾರೆ ನೋಡಿದಾಗ, ಕಡಿಮೆ ವಿದ್ಯಾಭ್ಯಾಸ ಮಾಡಿದವರು ಅನಿವಾರ್ಯ ಹಾಗೂ ಆರ್ಥಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಈ ಕೆಲಸವನ್ನು ಆಯ್ದು ಮಾಡಿಕೊಂಡಿದ್ದಾರೆ.

6. ಕಾರ್ಯಕರ್ತೆಯರ ಕುಟುಂಬದ ವಿಧವನ್ನು ಗಮನಿಸಿದಾಗ, ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಕ್ರಮವಾಗಿ, ಶೇಕಡಾ 80, 80, 60, 70 ಹಾಗೂ 60 ರಷ್ಟು ಕಾರ್ಯಕರ್ತೆಯರು ವಿಭಕ್ತ ಕುಟುಂಬದವರಾಗಿದ್ದಾರೆ. ಇನ್ನೂಳಿದ ಶೇಕಡಾ ಪ್ರಮಾನದಲ್ಲಿ ಅವಿಭಕ್ತ ಕುಟುಂಸಬವರಾಗಿದ್ದಾರೆ.

ಒಟ್ಟಾರೆ ಗಮನಿಸಿದಾಗ, ಗ್ರಾಮಗಳಲ್ಲಿ ಇಂದಿಗು ವಿಭಕ್ತ ಕುಟುಂಬದವರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ.

7. ಕಾರ್ಯಕರ್ತೆಯರ ಮನೆಯ ಸ್ವರೂಪವನ್ನು ನೋಡಿದಾಗ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಕ್ರಮವಾಗಿ ಶೇಕಡಾ 40 ಹಾಗೂ 30 ರಷ್ಟು ಶೀಟ್ ಹಾಗೂ ಗುಡಿಸಿಲುಗಳಲ್ಲಿ ವಾಸವಾಗಿರುವುದು ಕ್ಷೇತ್ರ ಅಧ್ಯಯನದ ಮೂಲಕ ಕಂಡುಬಂದಿದೆ. ಬಿಸಿಯೂಟ ಹಾಗೂ ಎ.ಎನ್.ಎಂ ಶೇಕಡಾ 30 ರಷ್ಟು ಹಂಚಿನ ಹಾಗೂ ಮಾಳಿಗೆ ಮನೆಯನ್ನು ಹೊಂದಿದ್ದಾರೆ.

ಎ.ಎನ್.ಎಂ ಗಾಗೂ ಅತಿಥಿ ಶಿಕ್ಷಕಿಯರು ಆರ್.ಸಿ.ಸಿ. ಮನೆಗಳಲ್ಲಿ ವಾಸವಾಗಿರುವುದು ಕಂಡುಬಂದಿದೆ. ಒಟ್ಟಾರೆ ಗಮನಿಸಿದರೆ, ಅವರವರ ಆರ್ಥಿಕತೆ ಹಾಗೂ ಸರ್ಕಾರದ ಅನುದಾನಗಳಿಗೆ ಅನುಗುಣವಾಗಿ ಕಾರ್ಯಕರ್ತೆಯರು ವಿವಿಧ ರೀತಿಯ ಮನೆಗಳನ್ನು ಹೊಂದಿರುವುದು ಕಂಡುಬಂದಿದೆ.

8. ಕಾರ್ಯಕರ್ತೆಯರ ವಾಸಸ್ಥಳ ಹಾಗೂ ವೃತ್ತಿ ಸ್ಥಳವನ್ನು ಗಮನಿಸಿದಾಗ, ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರು ಕ್ರಮವಾಗಿ ಶೇಕಡಾ 60,70,ಹಾಗೂ 80 ರಷ್ಟು ತಮ್ಮ ಸ್ವಂತ ಊರಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ಬೇರೆ ಊರಿನಿಂದ ಒಂದು ಕಾರ್ಯನಿರ್ವಹಿಸುತ್ತಿರುವವರ ಪೈಕಿ ಹೆಚ್ಚಾಗಿ ಎ.ಎನ್.ಎಮ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ ಶೇಕಡಾ 50 ಹಾಗೂ 70 ರಷ್ಟು ಕಂಡುಬಂದಿದ್ದಾರೆ.

ಒಟ್ಟಾರೆ ಗಮನಿಸಿದಾಗ, ಅನಿವಾರ್ಯತೆಯ ಮೆರೆಗೆ ಕಾರ್ಯಕರ್ತೆಯರು ತಮ್ಮ ಸ್ವಂತ ಊರಿನಿಂದ, ಕೆಲಸದ ಸ್ಥಳಕ್ಕೆ ಪ್ರತಿದಿನ ಪ್ರಯಾಣಿಸಿ ಕಾರ್ಯನಿರ್ವಹಿಸುತ್ತಿರುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ.

9. ಕಾರ್ಯಕರ್ತೆಯರ ಉಳಿತಾಯದ ಕುರಿತು ಗಮನಿಸಿದಾಗ, ಬಿಸಿಯೂಟ, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ 60, 60 ಮತ್ತು 70 ರಷ್ಟು ತಮ್ಮ ಆದಾಯದಲ್ಲಿ ಭವಿಷ್ಯದ ದೃಷ್ಟಿಯಿಂದ ಉಳಿತಾಯ ಮಾಡುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.ಅದೇ ರೀತಿ ಬಿಸಿಯೂಟ ಹಾಗೂ ಎ.ಎನ್.ಎಂ ಕಾರ್ಯಕರ್ತೆಯರು ಶೇಕಡಾ 40 ರಷ್ಟು ಉಳಿತಾಯ ಮಾಡದೇ ಇರುವುದು ಕಂಡುಕೊಳ್ಳಲಾಗಿದೆ. ಒಟ್ಟಾರೆ ನೋಡಿದಾಗ, ಉಳಿತಾಯವು ಆದಾಯದ ಮೇಲೆ ಅವಲಂಬಿಸಿರುವುದರಿಂದ ಅವರವರ ಖರ್ಚನ್ನು ಹೊರೆತುಪಡಿಸಿ ಉಳಿದ ಗೌರವಧನವನ್ನು ಮೀಸಲಿಟ್ಟಿರುವುದಾಗಿ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಫಲಿತವಾಗಿದೆ.

10. ಕಾರ್ಯಕರ್ತೆಯರು ಸ್ಥಳೀಯ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಎಷ್ಟರ ಮಟ್ಟಿಗೆ ಸಫಲರಾಗಿದ್ದಾರೆಂದು ನೋಡಿದಾಗ, ಆಶಾ ಕಾರ್ಯಕರ್ತೆಯರನ್ನು ಹೊರತುಪಡಿಸಿ ಇನ್ನುಳಿದ ಕಾರ್ಯಕರ್ತೆಯರು ಕ್ರಮವಾಗಿ ಶೇಕಡಾ 50,60,50 ಹಾಗೂ 60 ರಷ್ಟು ಸ್ಥಳೀಯ ಸೌಲಭ್ಯಗಳ ಫಲಾನುಭವಿಗಳಾಗಿದ್ದಾರೆ. ಸರ್ಕಾರಿ ಹಾಗೂ ಸ್ಥಳೀಯ ಸೌಲಭ್ಯಗಳನ್ನು ಹೊಂದದವರು ಶೇಕಡಾ 60 ರಷ್ಟು ಆಶಾ ಕಾರ್ಯಕರ್ತೆಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಒಟ್ಟಾರೆ ಗಮನಿಸಿದರೆ, ಸರ್ಕಾರಿಯಡಿಯಲ್ಲಿ ಕಾರ್ಯಕರ್ತೆಯರಿಗೆ ಅಗತ್ಯ ಯೋಜನೆಗಳು ತಲುಪದೇ ಇರುವುದ ಅಧ್ಯಯನದ ಮೂಲಕ ಕಂಡುಕೊಂಡ ಫಲಿತವಾಗಿದೆ.

11. ಕಾರ್ಯಕರ್ತೆಯರ ಮನೆಯ ಸದಸ್ಯರು ಸರ್ಕಾರಿ ನೌಕರಿಯಲ್ಲಿ ತೊಡಗಿಕೊಂಡವರ ಸಂಖ್ಯೆಯನ್ನು ಗಮನಿಸಿದಾಗ, ಅತಿಥಿ ಶಿಕ್ಷಕಿಯರ ಕುಟುಂಬ ಸದಸ್ಯರು ಶೇಕಡಾ 50% ರಷ್ಟಿದ್ದಾರೆ. ಆಶಾ ಕಾರ್ಯಕರ್ತೆರು ಹಾಗೂ ಬಿಸಿಯೂಟ ಕಾರ್ಯಕರ್ತೆಯರು ಕುಟುಂಬ ಸದಸ್ಯರು ಅನುಕ್ರಮವಾಗಿ ಶೇಕಡಾ 70 ಮತ್ತು 90 ರಷ್ಟು ಕುಟುಂಬದ ಸದಸ್ಯರು ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವವರು ಕಂಡುಬಂದಿದ್ದಾರೆ.

ಒಟ್ಟಾರೆ ಗಮನಿಸಿದಾಗ, ಬಹುತೇಕವಾಗಿ ಕುಟುಂಬದ ಸದಸ್ಯರು ಸರ್ಕಾರೇತರ ನೌಕರಿಯಲ್ಲಿ ಹಾಗೂ ನಿರುದ್ಯೋಗಿಗಳಾಗಿರುವುದು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಫಲಿತಗಳಲ್ಲಿ ಒಂದಾಗಿದೆ.

12. ಕಾರ್ಯಕರ್ತೆಯರ ಗೌರವಧನವನ್ನು ಖರ್ಚುಮಾಡುವ ಅಥವಾ ಮನೆಗೆ ಬಳಸುವ ಸ್ವಾತಂತ್ರ್ಯದ ಬಗ್ಗೆ ಗಮನಿಸಿದಾಗ, ಆಯ್ದುಕೊಂಡ ಕಾರ್ಯಕರ್ತೆಯರು ಕ್ರಮವಾಗಿ ಶೇಕಡಾ 40, 50, 60, 70 ಮತ್ತು 50 ರಷ್ಟುಖರ್ಚುಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಅದೇ ರೀತಿ, ಆಶಾ ಕಾರ್ಯಕರ್ತೆ, ಅಂಗನವಾಡಿ ಕಾರ್ಯಕರ್ತೆ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ, ಶೇಕಡಾ 60, 50 ಮತ್ತು 50 ರಷ್ಟು ಗೌರವಧನವನ್ನು ಖರ್ಚು ಮಾಡುವ ಸ್ವಾತಂತ್ರ್ಯವನ್ನು ಹೊಂದದವರಾಗಿದ್ದಾರೆ.

ಒಟ್ಟಾರೆ ಗಮನಿಸಿದಾಗ. ಕಾರ್ಯಕರ್ತೆಯರು ತಮ್ಮಗೆ ಗೌರವಧನವನ್ನು ಬಹುತೇಕವಾಗಿ ತಮ್ಮ ಮನೆಯ ಹಿರಿಯರಿಗೆ ಹಾಗೂ ಮನೆಯ ಯಜಮಾನರಿಗೆ ಒಪ್ಪಿಸುವುದಾಗಿ ಹೇಳಿದ್ದಾರೆ. ಇನ್ನೂ ಕೆಲವರು ದುಡಿಯುವ ಹಣವನ್ನು ಮನೆಗಾಗಿ ಖರ್ಚುಮಾಡಲು ಅವಕಾಶವಿಲ್ಲದಿರುವುದಕ್ಕೆ ಕಾರಣ ನಾವು ಮಹಿಳೆಯರಾಗಿರುವುದೆಂದು ತಿಳಿಸಿದ್ದಾರೆ.

13. ಕಾರ್ಯಕರ್ತೆಯರ ಗೌರವಧನವು ತಮ್ಮ ಆರ್ಥಿಕತೆಗೆ ತೃಪ್ತಿಯನ್ನು ತರುತ್ತಿದೆಯೇ ಎಂದು ಗಮನಿಸಿದಾಗ, ಅಂಗನವಾಡಿ ಕಾರ್ಯಕರ್ತೆ, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ ಶೇಕಡಾ 70, 60 ಮತ್ತು 70 ರಷ್ಟು ತೃಪಿಯನ್ನು ಹೊಂದಿದ್ದಾರೆ. ಆಶಾ ಕಾರ್ಯಕರ್ತೆರು ಶೇಕಡಾ 60 ರಷ್ಟು ತೃಪ್ತಿ ಇಲ್ಲದಿರುವುದಾಗಿ ತಿಳಿಸಿದ್ದಾರೆ.

ಒಟ್ಟಾರೆ ಗಮನಿಸಿದಾಗ, ಆಯ್ದುಕೊಂಡ ಕಾರ್ಯಕರ್ತೆಯರು ಪೂರ್ಣ ಪ್ರಮಾಣದಲ್ಲಿ ಗೌರವಧನ ಬಗ್ಗೆ ತೃಪ್ತಿ ಹೊಂದದಿರುವುದು ಕಂಡುಕೊಂಡ ಫಲಿತವಾಗಿದೆ.

14. ಕೋವಿಡ್ 19ರ ನಂತರದಲ್ಲಿ ಕಾರ್ಯಕರ್ತೆಯರ ಬೇಡಿಕೆಗಳು ಪೂರ್ಣಗೊಂಡಿವೆಯೇ ಎಂಬುದರ ಬಗ್ಗೆ ಅವಲೋಕಿಸಿದಾಗ ಶೇಕಡಾ 60 ರಷ್ಟು ಎ.ಎನ್.ಎಂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಿರುವುದಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದ್ದಾರೆ. ಅದೇ ರೀತಿ ಬಿಸಿಯೂಟ ಕಾರ್ಯಕರ್ತೆಯರು ಕೋವಿಡ್ 19ರ ಬಳಿಕವೂ ಸಹಾ ತಮ್ಮ ಈಡೇರಿಕೆಗಳು ಪೂರ್ಣಗೊಂಡಿಲ್ಲವೆಂದು ಶೇಕಡಾ 70 ರಷ್ಟು ತಿಳಿಸಿದ್ದಾರೆ.

ಒಟ್ಟಾರೆ ಗಮನಿಸಿದಾಗ, ಆಯ್ದುಕೊಂಡ ಕಾರ್ಯಕರ್ತೆಯರಿಗೆ ಕೋವಿಡ್ 19ರ ನಂತರದಲ್ಲಿ ತಮ್ಮ ಬೇಡಿಕೆಗಳು ಪೂರ್ಣಗೊಂಡಿಲ್ಲವೆಂಬುದು ಕಂಡುಕೊಂಡ ಫಲಿತವಾಗಿದೆ.

15. ಕೋವಿಡ್ 19ರ ನಂತರದಲ್ಲಿ ಕಾರ್ಯಕರ್ತೆಯರಿಗೆ ಕೆಲಸದ ಒರೆ ಕಡಿಮೆಯಾಗಿದೆಯೇ ಎಂದು ನೋಡಿದಾಗ, ಆಶಾ ಕಾರ್ಯಕರ್ತೆಯರು, ಎ.ಎನ್.ಎಂ ಹಾಗೂ ಅತಿಥಿ ಶಿಕ್ಷಕಿಯರು ಕ್ರಮವಾಗಿ ಶೇಕಡಾ 80,80 ಮತ್ತು 50 ರಷ್ಟು ಕೆಲಸದ ಭಾರ ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ. ಅದೇ ರೀತಿ ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರು ಶೇಕಡಾ 50 ಮತ್ತು 60 ರಷ್ಟು ತಮ್ಮ ಕೆಲಸದ ಹೊರೆ ಕೋವಿಡ್ 19ರ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಒಂದೇ ರೀತಿಯಲ್ಲಿರುವುದಾಗಿ ತಿಳಿಸಿದ್ದಾರೆ.

ಒಟ್ಟರೆ ಗಮನಿಸಿದಾಗ, ಕಾರ್ಯಕರ್ತೆಯರಿಗೆ ತಮ್ಮ ಕೆಲಸದ ಹೊರೆ ಅಷ್ಟೇನು ವ್ಯತ್ಯಾಸವಿಲ್ಲದಿರುವುದು ಕಂಡುಕೊಂಡು ಫಲಿತವಾಗಿದೆ.

16. ಕೋವಿಡ್ 19ರ ಸಂದರ್ಭದಲ್ಲಿ ಕಾರ್ಯಕರ್ತೆಯರಿಗೆ ಹೆಚ್ಚಿನ ಪ್ರೋತ್ಸಾಹಧನ ಹಾಗೂ ಉದ್ಯೋಗ ಭದ್ರತೆಯನ್ನು ಸರ್ಕಾರವು ನೀಡಿದೆಯೇ ಎಂದು ನೋಡಿದಾಗ, ಆಯ್ದುಕೊಂಡ ಕಾರ್ಯಕರ್ತೆಯರು ಕ್ರಮವಾಗಿ ಶೇಕಡಾ 30, 40, 30, 20 ಮತ್ತು 40 ರಷ್ಟು ಮಾತ್ರ ಅಧಿಕ ಪ್ರೋತ್ಸಾಹಧನ ಮತ್ತು ಉದ್ಯೋಗ ಭದ್ರತೆಯನ್ನು ಕಲ್ಪಿಸಿರುವುದಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದ್ದಾರೆ. ಇನ್ನೂಳೀದ ಶೇಕಡಾ ಪ್ರಮಾಣಗಳಲ್ಲಿ ಯಾವುದೇ ರೀತಿಯ ಅಧಿಕ ಪ್ರೋತ್ಸಾಹಧನ ಹಾಗೂ ಉದ್ಯೋಗ ಭದ್ರತೆಯನ್ನು ಸರ್ಕಾರವು ಕಲ್ಪಿಸಲಾಗಿಲ್ಲವೆಂದು ಕಾರ್ಯಕರ್ತೆಯರು ತಿಳಿಸಿದ್ದಾರೆ.

ಒಟ್ಟಾರೆಯಾಗಿ ಗಮನಿಸಿದಾಗ, ಕಾರ್ಯಕರ್ತೆಯರಿಗೆ ಕೋವಿಡ್ 19ರ ಬಳಿಕವೂ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆಗಳು ಕಂಡುಬಂದಿರುವುದ ಕಂಡುಬರದೆ ಇರುವುದು ಕಂಡುಕೊಂಡ ಫಲಿತವಾಗಿದೆ.

## ಸಲಹೆಗಳು

1. ಸರ್ಕಾರಿ ಯೋಜನೆಗಳಲ್ಲಿ ಒಂದಾದ ವಸತಿ ಯೋಜನೆಯು ಸಮರ್ಪಕವಾಗಿ ತಮಟ್ಟದ ಮಹಿಳಾ ಕಾರ್ಯಕರ್ತೆಯರಿಗೆ ಸ್ಥಳೀಯ ಸರ್ಕಾರಗಳು ತಲುಪಿಸಬೇಕಾಗಿದೆ.
2. ತಳಮಟ್ಟದ ಅಭಿವೃದ್ಧಿ ಕಾರ್ಯಕರ್ತೆಯರಿಗೆ ವಿಶೇಷ ಸಾಲ ಸೌಲಭ್ಯಗಳನ್ನು ಬ್ಯಾಂಕುಗಳು ಒದಗಿಸಬೇಕು.
3. ಕಾರ್ಯಕರ್ತೆಯರಿಗೆ ಸರ್ಕಾರವು ಪ್ರತ್ಯೇಕವಾದ ಉಳಿತಾಯ ಯೋಜನೆಗಳನ್ನು ರೂಪಿಸಬೇಕಾಗಿದೆ.
4. ಅನಾರೋಗ್ಯಕ್ಕೆ ಕಾರಣವಾದ ಅಸ್ವಚ್ಚತೆಯನ್ನು ಹೋಗಲಾಡಿಸಲು, ಗ್ರಾಮೀಣ ಜನರನ್ನು ಜಾಗೃತಿಗೊಳಿಸಲು ಕಾರ್ಯಕರ್ತೆಯರನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯಮಟ್ಟವನ್ನು ಹೆಚ್ಚಿಸಬಹುದಾಗಿದೆ.
5. ಕಾರ್ಯಕರ್ತೆಯರಿಗೆ ಗೌರವಧನ ಅತ್ಯಲ್ಪವಾಗಿರುವುದರಿಂದ, ಸರ್ಕಾರವು ಇವರಿಗೆ ಗೌರವಧನವನ್ನು ಹೆಚ್ಚಳಗೊಳಿಸಿ ನಿರ್ದಿಷ್ಟ ಸಮಯಕ್ಕೆ ನೀಡುವ ಮೂಲಕ ಇವರ ಅಭಿವೃದ್ಧಿಗೆ ಆಸರೆಯಾಗಬೇಕಿದೆ.
6. ಇನ್ನೂ ಅಧಿಕ ಆಶಾ ಕಾರ್ಯಕರ್ತೆಯರ ಅವಶ್ಯಕತೆ ಗ್ರಾಮೀಣ ಜನರಿಗೆ ಇದೆ. ಪ್ರತಿ 1000 ಜನರಿಗೆ ಒಬ್ಬ ಆಶಾ ಕಾರ್ಯಕರ್ತೆಯು ಏಕಕಾಲದಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಆದ ಕಾರಣ ಪ್ರತಿ 1000 ಜನತೆಗೆ ಕನಿಷ್ಠ ಇಬ್ಬರನ್ನು ನೇಮಕಮಾಡಬೇಕಾಗಿದೆ.
7. ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರು ತಮ್ಮ ವೃತ್ತಿಯಲ್ಲಿ ಅನೇಕ ಒತ್ತಡಗಳನ್ನು ಪ್ರತಿದಿನ ಎದುರಿಸುತ್ತಾರೆ. ಆದ್ದರಿಂದ ಪ್ರತಿ ಅಂಗನವಾಡಿ ಅಥವಾ ಕಾರ್ಯಕರ್ತೆಯರಿರುವ (ಕಛೇರಿಗಳಲ್ಲಿ) ಮಾನಸುಕ ಒತ್ತಡವನ್ನು ಕಡಿಮೆಗೊಳಿಸಲು ಹಾಗೂ ಉತ್ಸಾಹದಿಂದ ಸೇವೆಸಲ್ಲಿಸುವ ಸಲುವಾಗಿ ಇವರಿಗೆ ಯೋಗ ಮತ್ತು ಧ್ಯಾನದಂತಹ ತರಗತಿಗಳನ್ನು ಕೈಗೊಳ್ಳಬೇಕಾಗಿದೆ

8. ಆಶಾ ಕಾರ್ಯಕರ್ತೆಯರಿಗೆ ಎಲ್ಲಾ ಕಾಯಿಲೆಗಳ ಬಗ್ಗೆ ಜ್ಞಾನ ಮತ್ತು ಅವುಗಳ ಲಕ್ಷಣಗಳ ಬಗ್ಗೆ ಅರಿವು ಮೂಡಿಸಬೇಕು. ಇದರಿಂದ ಗ್ರಾಮೀಣ ಜನರಿಗೆ ಎಚ್ಚರಿಕೆ ಹಾಗೂ ಕಾಯಿಲೆಗಳ ಬಗ್ಗೆ ಮಾಹಿತಿಯನ್ನು ನೀಡಲು ಸಹಾಕಾರಿಯಾಗಲು ಸಾಧ್ಯವಾಗುತ್ತದೆ.
9. ಆಶಾ ಕಾರ್ಯಕರ್ತೆಯರ ಮಾಹಿತಿ ಮತ್ತು ಲಭ್ಯತೆಗಳ ಮಾಹಿತಿಯನ್ನು ಜನ ಸಾಮಾನ್ಯರಿಗೆ ತಿಳಿಯುವಂತೆ ಪ್ರತ್ಯೇಕವಾಗಿ ಆಪ್‌ಗಳನ್ನು ಸರ್ಕಾರವು ರೂಪಿಸಬೇಕು.
10. ಚಿತ್ರದುರ್ಗ ತಾಲ್ಲೂಕಿನ ಬಹುತೇಕ ಅಂಗನವಾಡಿ ಕೇಂದ್ರಗಳು ಮೂಲಭೂತ ಸೌಲಭ್ಯಗಳನ್ನು ಹೊಂದಿಲ್ಲ. ಈ ಕಾರಣಕ್ಕಾಗಿ ಸ್ಥಳೀಯ ಸರ್ಕಾರವು ಗಮನಹರಿಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು.
11. ನೈರ್ಮಲ್ಯ ಸಮಿತಿಯೊಡನೆ ಆಶಾ ಕಾರ್ಯಕರ್ತೆಯರು ಸಹಾ ಜೊತೆಯಲ್ಲಿ ಕಾರ್ಯನಿರ್ವಹಿಸಿದರೆ ಗ್ರಾಮಗಳ ನೈರ್ಮಲ್ಯವನ್ನು ಸಮರ್ಪಕವಾಗಿ ಕಾಪಡಬಹುದಾಗಿದೆ.
12. ಕಾರ್ಯಕರ್ತೆಯರು ತಾವು ಹೆಚ್ಚಿನ ಸಮಯವನ್ನು ಸಂಚಾರಕ್ಕಾಗಿ ಮೀಸಲಿಡುವ ಅನಿವಾರ್ಯತೆ ಇರುವುದರಿಂದ, ಇವರುಗಳಿಗೆ ಸ್ಥಳೀಯ ಸರ್ಕಾರಗಳು ಪ್ರತ್ಯೇಕ ವಾಹನಗಳನ್ನು ಪ್ರತಿ ಅಂಗನವಾಡಿ ಅಥವಾ ಆಶಾ ಕಾರ್ಯಕರ್ತೆಯರ ಕೇಂದ್ರಗಳಿಗೆ ಒದಗಿಸಬೇಕು. ಇದರಿಂದ ಅವರುಗಳ ಸಮಯವು ವ್ಯರ್ಥವಾಗದೆ ಇನ್ನೂ ಅಧಿಕ ಸಮಯವನ್ನು ತಮ್ಮ ಕೆಲಸಗಳಿಗೆ ಮೀಸಲಿಡಲು ಅನುಕೂಲವಾಗುತ್ತದೆ.
13. ಸರ್ಕಾರವು ಉತ್ತಮ ಗುಣ ಮಟ್ಟದ ಪೌಷ್ಠಿಕ ಆಹಾರವನ್ನು ಶಾಲಾ ಹಾಗೂ ಶಾಲಾ ಪೂರ್ವ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ತಾಯಂದಿಯರಿಗೆ ಒದಗಿಸಿದಲ್ಲಿ ಆರೋಗ್ಯವನ್ನು ಸುಧಾರಿಸಬಹುದು.
14. ಸರ್ಕಾರವು ಶಾಲಾ ಹಾಗೂ ಶಾಲಾ ಪೂರ್ವ ಮಕ್ಕಳಿಗೆ ಹಾಲಿನ ಜೋತೆಗೆ ಹಣ್ಣುಗಳನ್ನು ನೀಡುವುದರಿಂದ ಪೌಷ್ಠಿಕತೆಯನ್ನು ಸುಧಾರಿಸಬಹುದು.
15. ಅಡುಗೆ ಮನೆಗಳಲ್ಲಿ ಉತ್ತಮ ರೀತಿಯ ಗಾಳಿ ಹಾಗೂ ಬೆಳಕಿನ ವ್ಯವಸ್ಥೆಯನ್ನು ಮಾಡಬೇಕಿದೆ, ಇದರಿಂದ ಅಡುಗೆ ಮನೆಯಲ್ಲಿ ಸಂಭವಿಸುವ ಅಪಘಾತಗಳನ್ನು ತಡೆಯಬಹುದು.
16. 108 ಆರೋಗ್ಯ ಕವಚದ ಅನುಕೂಲವನ್ನು ಪ್ರತಿ ಗ್ರಾಮೀಣ ಜನರಿಗೆ ಸಮರ್ಪಕವಾಗಿ ತಲುಪುವಂತೆ ಮಾಡಲು ಹೆಚ್ಚಿನ ವಾಹನಗಳನ್ನು ಬಿಡುಗಡೆಗೊಳಿಸಬೇಕು.
17. ಕಾರ್ಯಕರ್ತೆಯರು ಕೆಲಸಕ್ಕೆ ಹಾಜರಾಗದ ದಿನಗಳಲ್ಲಿಯೂ ಸಹಾ ಗೌರವಧನವನ್ನು ನೀಡಬೇಕು.
18. ಸ್ಥಳೀಯ ಜನರಿಗೆ ಕಾರ್ಯಕರ್ತೆಯರ ಬಗ್ಗೆ ಅರಿಬು ಮೂಡಿಸಲು ಸರ್ಕಾರವು ವಿಶೇಷವಾದ ಜಾಹೀರಾತುಗಳನ್ನು ಸಿನಿಮಾ, ಟೆಲಿವಿಜನ್ ಹಾಗೂ ದಿನ ಪತ್ರಿಕೆಗಳಲ್ಲಿ ನೀಡಬೇಕು.
19. ಕಾರ್ಯಕರ್ತೆಯರಿಗೆ ಕಾರ್ಯನಿರ್ವಹಿಸುವ ಸಂಧರ್ಭದಲ್ಲಿ ಪ್ರಯಾಣದಲ್ಲಿ ರಿಯಾಯಿತಿ ಅಥವಾ ಉಚಿತ ಪ್ರಯಾಣದ ಸೌಲಭ್ಯವನ್ನು ಒದಗಿಸಬೇಕು.
20. ಇತರ ಇಲಾಖೆಗಳ ಕೆಲಸವನ್ನು ಸೂಚಿಸದೆ ಪೂರ್ಣಪ್ರಮಾಣದಲ್ಲಿ ಕರ್ಯಕರ್ತೆಯರಿಗೆ ವಹಿಸಿದ ಜವಾಬ್ದಾರಿಯನ್ನು ಮಾತ್ರ ನಿರ್ವಹಿಸಲು ಕ್ರಮ ಕೈಗೊಳ್ಳಬೇಕು.

## ಸಮಾರೋಪ

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್(ಎನ್.ಆರ್.ಹೆಚ್.ಎಂ)ಉದ್ದೇಶಗಳನ್ನು ಸಾಕಾರಗೊಳಿಸುವಲ್ಲಿ ಕಾರ್ಯಕರ್ತೆಯರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಕೋವಿಡ್ 19 ಸಾಂಕ್ರಮಿಕ ರೋಗದಂತಹ ಸಂದರ್ಭದಲ್ಲಿ ತಳಮಟ್ಟದ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯರು ತಮ್ಮ ಕೆಲಸವನ್ನು ನಿಷ್ಠೆಯಿಂದ ನಿರ್ವಹಿಸಿ ಇಡೀ ಭಾರತ ದೇಶಕ್ಕೆ ಹಬ್ಬಿಕೊಂಡಿದ್ದ ಸಾಂಕ್ರಮಿಕ ರೋಗವನ್ನು ತಡೆಗಟ್ಟುವಲ್ಲಿ ಹಾಗೂ ರೋಗ ಹರಡಿದ ಜನಕ್ಕೆ ಧೈರ್ಯವನ್ನು ತುಂಬಿ ಪುನಃ ಆರೋಗ್ಯವಂತರನ್ನಾಗಿ ಮಾಡಿದ್ದಾರೆ.

ಪ್ರಸ್ತುತ ಅಧ್ಯಾಯನದಲ್ಲಿ ಕಂಡುಬರುವಂತೆ, ಆಯ್ಕೆ ಮಾಡಿಕೊಳ್ಳಲಾದ 50 ತಳಮಟ್ಟದ ಮಹಿಳಾ ಅಬಿವೃದ್ಧಿ ಕಾರ್ಯಕರ್ತೆಯರಲ್ಲಿ ಬಹಳಷ್ಟು ಕಾರ್ಯಕರ್ತೆಯರು ತೊಂದರೆಗೆ ಇಡಾಗಿದ್ದಾರೆ. ಆದರೂ ಸಹಾ ತಮ್ಮ ಕರ್ತವ್ಯ ಪಾಲನೆಯಲ್ಲಿ ಒಂದಿಷ್ಟು ಬೇಜವಾಬ್ದಾರಿಯನ್ನು ತೋರಿಸದೇ ಇರುವುದು ಹೆಮ್ಮೆಯ ವಿಷಯವಾಗಿದೆ. ಈ ಸಾಂಕ್ರಮಿಕ ರೋಗದಿಂದಾಗಿ ಕಾರ್ಯಕರ್ತೆಯರಿಗೆ ಸಾಮಾನ್ಯ ಕೆಲಸದ ಜೊತೆಗೆ ಹೆಚ್ಚಿನ ಹೊರೆಯನ್ನು ಹೊತ್ತಿದ್ದಾರೆ.

ಇದೇ ರೀತಿ, ಕೋವಿಡ್ 19ರ ಸಂದರ್ಭದಲ್ಲಿ ಕಾರ್ಯಕರ್ತೆಯರು ಸಾಮಾಜಿಕವಾಗಿ ಹಿಂಸೆಯನ್ನು ಅನುಭವಿಸಿದ್ದಾರೆ. ಕುಟುಂಬದ ಜೊತೆ ಬೆರೆಯಲು ಆಗದೆ, ತಮ್ಮ ಮಕ್ಕಳ ಬಗ್ಗೆ ಸರಿಯಾಗಿ ಕಾಳಜಿವಹಿಸಲು ಆಗದೇ ಇರುವುದರಿಂದ ಕುಟುಂಬಕ್ಕೆ ಕೆಲವು ಕಾಲ ದೂರ ಉಳಿದಿರುವುದು ಈ ಸಂದರ್ಭದಲ್ಲಿ ಕಂಡುಬಂದಿದೆ. ಕೋವಿಡ್ 19ರ ಸಂದರ್ಭದಲ್ಲಿ ರೋಗಿಗಳಿಗೆ ಸಮರ್ಪಕ ರೀತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ, ತಮಗೂ ಸರಿಯಾದ ಅಗತ್ಯತೆಗಳು ದೊರೆಯದೆ ವಂಚಿತರಾಗಿದ್ದರೆ.

ಕೋವಿಡ್ 19ರ ಘಟ್ಟದಲ್ಲಿ ಆರ್ಥಿಕ ತೊಂದರೆಗೆ ಈಡಾಗಿದ್ದಾರೆ. ಇದರಿಂದ ಅವರ ಉಳಿತಾಯಕ್ಕೆ ಅಡ್ಡಿ ಹಾಗೂ ಮಿತಿ ಮೀರಿದ ಖರ್ಚುಗಳಿಂದ, ತಮಗೆ ದೊರೆಯುವ ಗೌರವಧನದಲ್ಲಿ ತಮ್ಮ ತಮ್ಮ ಕುಟುಂಬಗಳನ್ನು ಪೋಷಿಸಲು ಬಹಳಷ್ಟು ಸವಾಲುಗಳನ್ನು ಎದುರಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿಯೂ ಸಹಾ ಕಾರ್ಯಕರ್ತೆಯರು ಕೋವಿಡ್ 19ರ ಪರಿಣಾಮದಿಂದ ಹೊರಬರದೇ ಆರ್ಥಿಕ ಹಾಗೂ ಸಾಮಾಜಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದಾರೆ. ಈ ಅಧ್ಯಯನದಿಂದ ಅವರ ಸ್ಥಿತಿಯನ್ನು ಸುಧಾರಿಸಲು ಸರಿಯಾದ ಕ್ರಮವನ್ನು ವಹಿಸಬೇಕೆಂದು ಸರ್ಕಾರಕ್ಕೆ ಸೂಚಿಸಬದುದಾಗಿದೆ.

## ಆಧಾರ ಗ್ರಂಥಗಳು


- ಸಂ.ಪ್ರಶಾಂತ್.ಹೆಚ್.ಡಿ. 2021, "ಕೋವಿಡ್ 10 ಬಿಕ್ಕಟ್ಟಿನ ಒಳ–ಹೊರಗೂ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
- ಖ್ಣಜ ಇಳಿಂಟಿಂಟುಳಿ ಖಿಟಞ, 23 ¸ಜಠಿಣ.2021, "ಸುಮಾರು 10 ಮಿಲಿಯನ್ ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತೆಯರು ರಾಷ್ಟ್ರ ವ್ಯಾಪ್ತಿ ಒಂದು ದಿನದ ಮುಷ್ಕರವನ್ನು ಆಚರಿಸಲಿದ್ದಾರೆ".
- ಕನ್ನಡಪ್ರಭ ವಿಶೇಷ ಸಂಚಿಕೆ 2022, "ದಿಟ್ಟತನದಿಂದ ಕೋರೋನಾ ಎದುರಿಸಿದ ಗ್ರಾಮೀಣ ವೈದ್ಯರು".

- ಸಂವಾದ, 2020, ಅಕ್ಟೋಬರ್, "ಕೋವಿಡ್ ನಂತರದ ಶಿಕ್ಷಣದ ಬಿಕ್ಕಟ್ಟುಗಳು ಮತ್ತು ಶಿಕ್ಷಕರ ಪರಿಸ್ಥಿತಿ".
- ಚಿಂತನಶೀಲ ಸಮಾಜಮುಖಿ, ಅಕ್ಟೋಬರ್,2020 "ಪ್ರಾಣ ಪಣಕ್ಕಿಟ್ಟು ಸೇವೆ ಸಲ್ಲಿಸುವ ವೈದ್ಯರ ಮೇಲಿರಲಿ ಗೌರವ", ಸಂಪುಟ–3, ಸಂಚಿಕೆ–10.
- ರವಿ.ಪಿ, 2016, "ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿನ ಆರೋಗ್ಯ ಸುಧಾರಣೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ", ಪಿ.ಎಚ್.ಡಿ ಮಹಾಪ್ರಬಂಧ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ. ಮೈಸೂರು.